

# ಆನೆಯಲ್ಲ.. ಆಕಳು!

ಕಾಲ ನಿಧಾನಕ್ಕೆ ಬದಲಾಗುತ್ತಿದೆ. ಒಂದು ಪ್ರಾಣಿ ಮತ್ತೊಂದು ಪ್ರಾಣಿಯ ಗಾತ್ರದಷ್ಟು ಬೆಳೆಯುವುದು ಒಂದೆಡೆಯಾದರೆ; ಒಂದು ಪ್ರಾಣಿಯ ಜಾಣ್ಮೆ ಮತ್ತೊಂದು ಪ್ರಾಣಿಯ ಬಳಿ ಇರುವುದು ಇನ್ನೊಂದು ಕಡೆ.

ಸಾಮರ್‌ಸೆಟ್‌ನ ಚಾರ್ಡ್ ಎಂಬಲ್ಲಿ ಫರ್ನೇ ಪ್ರಾಣಿಧಾಮವಿದೆ. ಅಲ್ಲಿ ಆನೆ ಗಾತ್ರಕ್ಕೆ ಬೆಳೆದು ನಿಂತಿರುವ 'ಚಿಲ್ಲಿ' ಎಂಬ ಆಕಳು ಈಗ ಗಿನ್ನಿಸ್ ದಾಖಲೆಯತ್ತ ದಾಪುಗಾಲು ಹಾಕುತ್ತಿದೆ.

ಒಂಭತ್ತು ವರ್ಷ ವಯಸ್ಸಿನ ಈ ಚಿಲ್ಲಿ, ಆರೂವರೆ ಅಡಿಗೂ ಹೆಚ್ಚು ಎತ್ತರ ಬೆಳೆದಿದೆ. ಅಲ್ಲದೆ ಇನ್ನೂ ಬೆಳೆಯುತ್ತಲೇ ಇದೆ. ಸಾವಿರ ಕೆ.ಜಿ ಗೂ ಹೆಚ್ಚು ತೂಕ ಹೊಂದಿದೆ ಎಂದು ಪ್ರಾಣಿಧಾಮದ ವ್ಯವಸ್ಥಾಪಕ ನವೋಮಿ ಕ್ಲಾರ್ಕ್ ಹೆಮ್ಮೆಯಿಂದ ಬೀಗುತ್ತಿದ್ದಾರೆ.

ಚಿಲ್ಲಿಯ ಜೊತೆ ಅದರ ಸಹೋದರಿ ಜ್ಯೂಬಿಲಿ ಮತ್ತು ಇತರ ಮೂರು ಹಸುಗಳನ್ನು ಅವುಗಳ ಮಾಲೀಕ ತನಗೆ ಬೇಡವೆಂದು ಪ್ರಾಣಿಧಾಮದಲ್ಲಿ ಬಿಟ್ಟು ಹೋಗಿದ್ದ. ಆಗಷ್ಟೇ ಚಿಲ್ಲಿ ಜನ್ಮ ಪಡೆದು ಆರು ದಿನಗಳು ಆಗಿದ್ದವು. ಈಗ ಮಾಲೀಕನೂ ಕೈ ಕಚ್ಚಿಕೊಳ್ಳುತ್ತಿದ್ದಾನಂತೆ.

ಚಿಲ್ಲಿ ಅಷ್ಟು ಎತ್ತರ ಬೆಳೆದಿದ್ದರೂ ಇತರ ಆಕಳುಗಳಂತೆ ಚಟುವಟಿಕೆಯಿಂದಲೇ ಇದೆ. ಪ್ರಾಣಿಧಾಮದ ಎಲ್ಲರ ಮುದ್ದಿನಿಂದ ಬೆಳೆಯುತ್ತಿರುವ ಚಿಲ್ಲಿಯನ್ನು ವೀಕ್ಷಿಸಲು ಜನ ನೂರಾರು ಸಂಖ್ಯೆಯಲ್ಲಿ ಆಗಮಿಸುತ್ತಿದ್ದಾರೆ.

■ ವಸಂತ್